ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಬೋಸಗಾ ಗ್ರಾಮದಲ್ಲಿ ೧೪೭೦ ಜನ ಇದ್ದಾರೆ, ಬಡವಾಳ ಗ್ರಾಮದಲ್ಲಿಯೂ ಜನಸಂಖ್ಯೆ ಕಡಿಮೆ ಇದೆ, ಬಿದನೂರಿನಲ್ಲಿ ೧೪೮೮ ಜನ ಇದ್ದಾರೆ. ಹಾವನೂರಿನಲ್ಲಿ ೧೪೨೧ ಜನ ಇದ್ದಾರೆ, ಅಂಕಲಗಾದಲ್ಲಿ ೧೬೦೪ ಜನ ಇದ್ದಾರೆ ಹೀಗೆ ಇನ್ನು ಇತರ ಹಳ್ಳಿಗಳಲ್ಲಿ ಜನಸಂಖ್ಯೆ ಕಡಿಮೆ ಇರುವ ಕಾರಣ ಇಲ್ಲಿ ಮಿನಿಮಂನೀಡ್ಸ್ ಪ್ರೋಗ್ರಾಂನ್ನು ಅನ್ವಯಮಾಡಿಲ್ಲ. ಇದು ೧೯೭೧ರ ಜನಸಂಖ್ಯೆ ಪ್ರಕಾರ ಇದೆ.

ಶ್ರೀ ಎಂ. ವೈ. ಪಾಟೀಲ್.—ಮಾನ್ಯಮಂತ್ರಿಗಳ ಹೇಳಿಕೆಯ ಪ್ರಕಾರ ಬೋಸಂಗ ಮತ್ತು ಬಡದಾಳ, ಹಾವನೂರು ಗ್ರಾಮಗಳು ಮಿನಿಮಂ ನೀಡ್ಸ ಪ್ರೋಗ್ರಾಂನ್ನು ಅನ್ವಯ ಮಾಡುವುದಕ್ಕೆ ೫೦-೬೦ ಜನ, ಇವರ ಮಿತಿಗೆ ಕಡಿಮೆ ಇದ್ದಾರೆ. ಆದರೂ ಮಾನ್ಯ ಸಚಿವರು ಈ ಮೂರು ಹಳ್ಳಿಗಳನ್ನಾದರೂ ಮಿನಿಮಂ ನೀಡ್ಸ ಪ್ರೋಗ್ರಾಂನಲ್ಲಿ ತೆಗೆದುಕೊಂಡು ಈ ವರ್ಷ ರಸ್ತೆಯ ಕೆಲಸಗಳನ್ನು ತೆಗೆದುಕೊಳ್ಳುವರೇ?

ಶ್ರೀ ಕಾಗೋಡು ತಿಮ್ಮಪ್ಪ.—ಕೇಂದ್ರ ಸರ್ಕಾರದವರೇ ಈ ಒಂದು ಪಟ್ಟಿಯನ್ನು ನಮಗೆ ಜನ ಗಣತಿಯ ಪ್ರಕಾರ ಕಳುಹಿಸುತ್ತಾರೆ. ಇದರಲ್ಲಿ ನಾವು ಅಂಕಿಸಂಖ್ಯೆಗಳನ್ನು ವ್ಯತ್ಯಾಸ ಮಾಡುವುದಕ್ಕೆ ಬರುವುದಿಲ್ಲ. ಅವರು ಏನು ಸಂಖ್ಯೆಗಳನ್ನು ಕೊಡುತ್ತಾರೋ ಅದನ್ನೇ ನಾವು ಇನ್‌ಕಾರ್ಪೊರೇಟ್ ಮಾಡಬೇಕಾಗುತ್ತದೆ. ೧೯೮೧ರ ಸೆನ್ಸ್‌ಸ್ ಪ್ರಕಾರ ನಾವು ಈ ಪ್ರೋಗ್ರಾಂನಲ್ಲಿ ಕೆಲವು ಹಳ್ಳಿಗಳನ್ನು ಗುರುತಿಸಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಾವು ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಈಗಾಗಲೇ ಕೆಲವು ಹಳ್ಳಿಗಳಿಗೆ ಪಿ.ಡಬ್ಲ್ಯೂ.ಡಿ ರೋಡ್ಸ್ ಇವೆ, ಹಾವನೂರುಗೆ ಪಿ.ಡಬ್ಲ್ಯೂ.ಡಿ ರೋಡು ಇದೆ, ಅಂಕಲಗಕ್ಕೆ ಇದೆ, ಮತ್ತು ಇನ್ನಿತರ ಹಳ್ಳಿಗಳಿಗೂ ರೋಡುಗಳು ಇವೆ, ಇವುಗಳ ಮೇಟೆನ್ಸ್‌ನ್ನು ಟಿಡಿಬಿ ಯವರು ಮಾಡುತ್ತಾರೆ. ಇನ್ನು ಕೆಲವು ಎಸ್‌ಆರ್‌ಪಿ ರಸ್ತೆಗಳು ಇವೆ ನಾವು ಹೊಸ ಕಾರ್ಯಕ್ರಮಗಳನ್ನು ರೂಪಿಸುವಾಗ ಮಾನ್ಯ ಸದಸ್ಯರು ಹೇಳತಕ್ಕ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

Working of Agricultural Research Station on Sugarcane in Bidar District.

449 SRI BHIMANNA KHANDRE.—Will the Chief Minister be pleased to state.—

(a) whether the Government is aware of the fact that there is an Agricultural Research Station on Sugarcane in Bidar District and if so, the date and year of its establishment;

(b) whether the qualified staff is posted to carry out the standard research;

(c) the total amount sanctioned by the World Bank (the date. year and the amount for five years upto a convenient date may be furnished);

(d) the progress achieved so far, (details may be furnished)?

SRI R. GUNDU RAO (Chief Minister).—

(a) Yes, It was started in the year 1963.

(b) Yes.

(c) Uunder the NARP (i.e,, World Bank) the total amornt of Rs. 40.84 lakhs has been sanctioned for a period of 5 years. It is operative for a period of 5 years from 1-4-1981.

(d) The Agricultural Reserch Station, Bidar, has indentified suitable varieties of sugarcane, wheat and cotton along with agronomic practices suitable for the Bidar area,

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಸ್ವಾಮಿ ಅಗ್ರಿಕಲ್ಚರಲ್ ರೀಸರ್ಚ್ ಸ್ಟೇಷನ್, ಬೀದರ್ ಇದು ಪಾರಂಭವಾಗಿ ೧೯ ವರ್ಷವಾಯಿತು. ಅಲ್ಲಿ ಸಂಶೋದನೆಯನ್ನು ನಡೆಸಲು ಅರ್ಹ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆಯೇ ಎಂದು ಕೇಳಿದಂತೆ, ತಾವು ಎಂದು ಉತ್ತರ ಕೊಟ್ಟಿದ್ದೀರಿ. ೧೯ವರ್ಷದಿಂದ ಈ ವರ್ಷದವರೆಗೆ ಇದಕ್ಕಾಗಿ ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಒದಗಿಸಿದ್ದಿರಿ ಮತ್ತು ಎಷ್ಟು ಖರ್ಚು ಮಾಡಿದ್ದೀರಿ ?

ಶ್ರೀ ಕಾಗೋಡು ತಿಮ್ಮಪ್ಪ (ಮುಖ್ಯ ಮಂತ್ರಿಗಳ ಪರವಾಗಿ).—ಪ್ರತಿ ವರ್ಷವೂ ೧೯೬೩ ರಿಂದ ಇದಕ್ಕಾಗಿ ನಾವು ಎಷ್ಟು ಹಣವನ್ನು ಒದಗಿಸಿದ್ದೇವೆನ್ನುವ ಮಾಹಿತಿ ನನ್ನಲ್ಲಿ ಸಧ್ಯಕ್ಕೆ ಇಲ್ಲ. ಇದಕ್ಕೆವರ್ಲ್ಡ್ ಬ್ಯಾಂಕಿನ ನೆರವು ಬಂದಿದೆಯೆಂದು ಹೇಳಿದ್ದೇವೆ, ಈಗಾಗಲೇ ಇದಕ್ಕೆ ಸಂಬಂಧಪಟ್ಟ ಕಾರ್ಯಕ್ರಮವನ್ನು ನಾವು ರೂಪಿಸಬೇಕು ಎಂದಿದ್ದೇವೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—೧೯೬೩ನೇ ಇಸವಿಯಲ್ಲಿ ಪ್ರಾರಂಭಿಸಿದ್ದರು, ೧೯ ವರ್ಷಗಳಿಂದ ಏನು ಮಾಡಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಬಡ್ಜೆಟ್‌ನಲ್ಲಿ ಹಣ ಇಟ್ಟರು ಇದುವರೆಗೆ ೧ ಪೈಸೆ ಕೂಡ ಖರ್ಚು ಮಾಡಿಲ್ಲ ಸರ್ಕಾರ ಮಲತಾಯಿ ಧೋರಣೆ ತೋರಿಸುತ್ತಿದೆ ಎಂದು ಹೇಳ ಬೇಕಾಗಿದೆ. ನಿಮ್ಮ ಅಧಿಕಾರಿಗಳನ್ನು ಕೇಳಿದರೆ ಸಿಬ್ಬಂದಿ ಇಲ್ಲವೆಂದು ಹೇಳುತ್ತಿದ್ದಾರೆ. ಹಣ ಲ್ಯಾಪ್ಸ್ ಆಗುತ್ತಿರುವುದನ್ನು ನೀವು ಒಪ್ಪುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—೧೯೬೩ನೇ ಇಸವಿಯಲ್ಲಿ ವ್ಯವಸಾಯ ಇಲಾಖೆಗೆ ಸಂಬಂಪಟ್ಟಿದ್ದು ೧೯೭೫ರಲ್ಲಿ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸ್ ಅಲ್ಲಿಗೆ ವರ್ಗಾಹಿಸಲಾಗಿದೆ. ಕಾರ್ಯಕ್ರಮ ಗಳನ್ನು ಮಾಡಿದ್ದೇವೆ, ಏನೂ ಮಾಡಿಲ್ಲವೆಂದು ಹೇಳುವುದು ಸರಿಯಾದುದಲ್ಲ. ಐಸಿ-೨೨೫ ಕಬ್ಬಿನ ತಳಿ ಯನ್ನು ಸಂಶೋಧನೆ ಮಾಡಿ ಟೆಸ್ಟೆಡ್ ಅಂಡ್ ರೆಕಮೆಂಡ್ ಫಾರ್ ಕಲ್ಟಿವೇಶನ್ ಎಂಬ ಒಂದು ವ್ಯವಸ್ಥೆ ಯನ್ನು ಮಾಡಿದ್ದೇವೆ. ಗೋಧಿ ತಳಿ ಸಂಶೋಧನೆ ನಡೆಸಿದ್ದೇವೆ. ಕಾಟನ್ ಜಿಎಚ್-೨೨, ಜಿಎಚ್-೨೩ ಸಂಶೋಧನೆ ಮಾಡಲಾಗಿದೆ. ಗ್ರೀನ್‌ಗ್ರಾಮ್ ಸಂಶೋಧನೆ ಮಾಡಲಾಗಿದೆ. ಇನ್ನು ಅನೇಕ ಸಂಶೋಧನೆಗಳನ್ನು ಮಾಡಿದ್ದೇವೆ. ಅಲ್ಲಿ ಏನು ಆಗಿಲ್ಲವೆಂದು ಹೇಳುವುದು ಸರಿಯಲ್ಲ. ನಿಖರವಾಗಿ ಇಷ್ಟೇ ಖರ್ಚು ಮಾಡಿದ್ದೇವೆಂದು ಹೇಳುವುದಕ್ಕೆ ನನ್ನ ಹತ್ತಿರ ಅಂಕಿಅಂಶಗಳಿಲ್ಲ

ಶ್ರೀ ಎಸ್. ಭೀಮಣ್ಣ ಖಂಡ್ರೆ.—ನಮ್ಮ ಬಡ್ಜೆಟ್‌ನಲ್ಲಿ ಇಟ್ಟಿದ್ದ ಹಣವನ್ನು ಖರ್ಚು ಮಾಡಿಲ್ಲ, ನಿಮ್ಮಹತ್ತಿರ ಲೆಕ್ಕಪತ್ರ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನನ್ನ ಹತ್ತಿರವಿರುವ ಕಡತದಲ್ಲಿ ಸಧ್ಯಕ್ಕೆ ಆ ವಿವರಗಳು ಇಲ್ಲ. ತದನಂತರ ಪ್ರತಿ ವರ್ಷ ಖರ್ಚು ಮಾಡಿರತಕ್ಕ ಹಣದ ವಿವರವನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಆ ವಿವರಗಳನ್ನು ಕಳುಹಿಸಿ ಕೊಡಿ, ವಿಶ್ವಬ್ಯಾಂಕಿನವರು ೧-೪-೧೯೮೧ರಲ್ಲಿ ೪೦ ಲಕ್ಷ ಮಂಜೂರೂ ಮಾಡಿದ್ದಾರೆ. ಆದರ ಜೊತೆಗೆ ರಾಜ್ಯ ಸರ್ಕಾರ ಎಷ್ಟು ಕೊಟ್ಟಿದೆ? ಕೇಂದ್ರ ಸರ್ಕಾರ ಎಷ್ಟು ಕೊಟ್ಟಿದೆ? ಈಗ ಎಷ್ಟು ಹಣ ಖರ್ಚು ಮಾಡಿದ್ದೀರಿ ? ಒಂದುವರೆ ವರ್ಷದಿಂದ ಎಷ್ಟು ಹಣ ಖರ್ಚು ಮಾಡಿದ್ದೀರಿ ? ಅಲ್ಲಿಗೆ ಸಿಬ್ಬಂದಿಯನ್ನು ಯಾವಾಗ ನೇಮಕ ಮಾಡಿದ್ದೀರಿ ?

ಶ್ರೀ ಕಾಗೋಡು ತಿಮ್ಮಪ್ಪ.—ಒಟ್ಟು ೪೪ ಲಕ್ಷದ ೮೪ ಸಾವಿರ ಇದೆ. ಈ ಸಂಶೋಧನ ಕೇಂದ್ರ ವನ್ನು ನಿರೂಪಿಸಿದಾಗ ವಿಶ್ವಬ್ಯಾಂಕಿನವರು ಇದು ನೀರಾವರಿ ಕೃಷಿ ಎಂದು ಒಪ್ಪಲಿಲ್ಲ. ಬೀದರ್ ಜಿಲ್ಲೆಯಲ್ಲಿ ಖುಷ್ಕಿ ಬೆಳೆ ಪ್ರಾಧಾನ್ಯವಾಗಿರುವುದರಿಂದ, ಖುಷ್ಕಿ ಬೆಳೆಗೆ ಹೊಂದಿಕೊಂಡತೆ ಜಮೀನು ವಗೈರೆ ಸ್ವಾಧೀನಪಡಿಸಿಕೊಳ್ಳಬೇಕು. ೪೫ ಎಕರೆ ಜಮೀನನ್ನ ಸ್ವಾಧೀನ ಪಡಿಸಿಕೊಳ್ಳ ತಕ್ಕಂತಹ ಎಲ್ಲಾ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಕೆಲವರು ಸ್ವಯಂಪ್ರೇರಣೆಯಿಂದ ಭೂಮಿ

ಯನ್ನು ಸರ್ಕಾರಕ್ಕೆ ವಹಿಸಿಕೊಡಲು ಮುಂದೆ ಬಂದಿದ್ದಾರೆ. ಜಮೀನಿಗೆ ಈವರೆಗೆ ಹಣ ಖರ್ಚು ಮಾಡಿಲ್ಲ, ಜಮೀನ ಪಡೆದುಕೊಂಡ ಮೇಲೆ ವಿಶ್ವಬ್ಯಾಂಕಿನ ನಿದರ್ಶನ ಕಾರ್ಯಕ್ರಮ ಕೇಳಿದ್ದೇವೆ, ಆ ಮೇಲೆ ಕಾರ್ಯಕ್ರಮ ಪ್ರಾರಂಭ ಮಾಡುತ್ತೇವೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—೧ ವರ್ಷ ೪ ತಿಂಗಳಿಂದ ನಮ್ಮ ಸರ್ಕಾರದಲ್ಲಿ ಹಣವಿಲ್ಲ ಬೀದರ್ ಜಿಲ್ಲೆಗೆ ಹಣ ಸಿಕಬೇಕು. ಬೀದರ್ ಜಿಲ್ಲಾ ಕರ್ನಾಟಕದಲ್ಲಿ ಇದೆಯೋ ಇಲ್ಲವೋ ಎನ್ನುವ ಅನುಮಾನ ಬಂದಿದೆ. ಬೀದರ್ ಜಿಲ್ಲಾ ಕರ್ನಾಟಕದಲ್ಲಿ ಇದೆ ಎನ್ನುವುದು ನಿಮ್ಮ ತಲೆಯಲ್ಲಿ ಇದೆಯೆ ?, ಇದು ಇದ್ದಿದ್ದರೆ ೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಸಿಬ್ಬಂದಿ ಇಟ್ಟು ಕೆಲಸಕಾರ್ಯಗಳನ್ನು ಮಾಡ ತ್ತಿದ್ದರು. ೪ ಎಕರೆ ಜಮೀನು ಪಡೆದುಕೊಳ್ಳುವುದಕ್ಕೆ ಹಣ ಖರ್ಚು ಮಾಡಿಲ್ಲ. ಸಿಬ್ಬಂದಿಯನ್ನು ಬೇಗ ಮಂಜೂರು ಮಾಡಿ ಈಗಲಾದರೂ ಕೂಡಪ್ರತಿವರ್ಷ ೧೦ ಲಕ್ಷ ಖರ್ಚುಮಾಡುವ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ —ಮಾನ್ಯ ಸದಸ್ಯರು ಬೀದರ್ ಜಿಲ್ಲಾ ಮರೆತು ಹೋಗಿದೆ ಎನ್ನುವ ಮಾತನ್ನು ಹೇಳಿದರು, ನಾವು ಮರೆತುಹೋದರು ನಮ್ಮ ಭೌಗೋಳಿಕ ವಾಗಿ ರಾಜ್ಯದ ಆಸ್ಥಿತ್ವದಲ್ಲಿಯೇ ಇದೆ. ವಿಶೇಷವಾಗಿ ಸಂಶೋಧನೆಗಳನ್ನು ಮಾಡಲಾಗುತ್ತಿದೆ, ಸಂಶೋಧನೆಗೆ ಸಂಬಂಧಪಟ್ಟ ಸಿಬಂಧಿ ವರ್ಗವನ್ನು ಪೋಸ್ಟ್ ಮಾಡಿದ್ದೇವೆ. ರಿಪೋರ್ಟ್ ಮಾಡಿಕೊಳ್ಳು. ತ್ತಿದ್ದಾರೆ, ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಭೂಮಿ ಪಡೆದುಕೊಳ್ಳುತಕ್ಕ ಸಂದರ್ಭದಲ್ಲಿ ಸ್ವಲ್ಪ ತೊಂದರೆಯಾಗಿದೆ. ಭೂಮಿಯನ್ನು ಕೊಡಿಸುತಕ್ಕ ಕೆಲಸದಲ್ಲಿ ಮುಂದಾಳತ್ವ ವಹಿಸಬೇಕು. ೩೫ ಎಕರೆ ಭೂಮಿ ನಮಗೆ ಬೇಕೆಂದರೆ ೩೫೦ ಎಕರೆ ಕೊಡಿಸುತ್ತೇವೆ ಎನ್ನುವ ಸಾಹಸ ಮಾಡಿದರೆ ಜನರಿಗೆ ಪ್ರತಿಫಲ ಸಿಗುತ್ತದೆ. ಸಂಶೋಧನ ಕೇಂದ್ರ ಮಾಡಲು ಒಳ್ಳೆಯದಾಗುತ್ತದೆ. ಹಣ ಕೊಡಿ ಎಂದು ಕೇಳುವು ದಿಲ್ಲ. ಭೂಮಿಯನ್ನು ಕೊಡಿಸಿ ಕೊಟ್ಟರೆ ನಮಗೆ ಬೇಗ ಕೆಲಸ ಮಾಡಲು ಅನುಕೂಲವಾಗುತ್ತದೆ. ಕಾನೂನು ಪ್ರಕಾರ ಭೂಮಿ ಪಡೆದುಕೊಳ್ಳಬೇಕಾದರೆ ಮಾನ್ಯ ಸದಸ್ಯರಿಗೆ ಗೊತ್ತಿದೆ, ನೋಟಿಫಿಕೇಶನ್, ಹೊರಡಿಸಿ ಆ ಮೇಲೆ ಭೂಮಿಯನ್ನು ಪಡೆದುಕೊಳ್ಳಬೇಕಾಗುತ್ತದೆ. ನಾವು ಕೂಡ ತೀವ್ರಗತಿಯಿಂದ ಕೆಲಸ ಮಾಡುತ್ತಿದ್ದೇವೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಮುನಸ್ಸಿದ್ದಲ್ಲಿ ಮಹಾದೇವ ಎನ್ನುವಹಾಗೆ, ಮಾಡಿದ್ದರೆ ಕೆಲಸ ವಾಗುತ್ತಿತ್ತು. ಬೇರೆ ಕಡೆ ಭೂಮಿಯನ್ನು ೧೮ ಸಾವಿರ ಕೊಟ್ಟು ತೆಗೆದುಕೊಳ್ಳುತ್ತಿರಿ, ನಮ್ಮ ಬೀದರ್ ಜಿಲ್ಲಾದೊಳಗೆ ೧ ಎಕರೆಗೆ ೨ ಸಾವಿರ ಫಿಕ್ಸ್ ಮಾಡಿದ್ದೀರಿ, ಹೆಚ್ಚಿಗೆ ಹಣವನ್ನು ಏತಕ್ಕೆ ಕೊಡ ಬಾರದು. ಇನ್‌ಕಂಟ್ಯಾಕ್ಸ್ ೮ ಸಾವಿರ ಹಾಕುತ್ತೀರಿ ಇವರಿಗೆಮಾತ್ರ ೨ ಸಾವಿರ ಕೊಡುತ್ತೀರಿ. ಭೂಮಿಯನ್ನು ಸರ್ಕಾರದವರು ಪಡೆದುಕೊಳ್ಳುವಾಗ ಮಾರ್ಕೆಟ್ ರೇಟ್ ನೋಡಿ ಅದನ್ನು ಕೊಟ್ಟು ಭೂಮಿಯನ್ನು ಪಡೆದುಕೊಳ್ಳಿ. ಹಾಗಾದರೆ ಭೂಮಿ ಬೇಗ ಸಿಗುತ್ತದೆ. ದಯವಿಟ್ಟು ಇದಕ್ಕೆ ಆಶ್ವಾಸನೆ ಕೊಡಬೇಕು. ಹಣವನ್ನು ಲ್ಯಾಪ್ಸ್ ಮಾಡದೆ ಖರ್ಚುಮಾಡಿ, ಕೆಲಸವನ್ನು ಕಂಪ್ಲೀಟ್ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಮಾರ್ಕೆಟ್ ವ್ಯಾಲ್ಯೂ ಪ್ರಕಾರ ತೆಗೆದುಕೊಳ್ಳುವುದಕ್ಕೆ ಕಾನೂನು ಪ್ರಕಾರ ಯಾವ ತರಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕೋ ಅದನ್ನು ಅನುಸರಿಸಿ ತೆಗೆದು ಕೊಳ್ಳುತ್ತೇವೆ. ಎಲ್ಲೆಲ್ಲಿ ಯಾವ್ಯಾ ರೇಟ್ ಇರುತ್ತದೆ ಅದನ್ನು ಕೊಡಲಾಗುತ್ತದೆ, ಎಲ್ಲಾ ಕಡೆ ಒಂದೇ ರೇಟ್ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಭೂಮಿ ಕೊಡಿಸುವುದಕ್ಕೆ ಮುಂದಾಳತ್ವ ವಹಿಸಿ ರೈತರನ್ನು ಒಪ್ಪಿಸಿ ಆ ಕೆಲಸ ಮಾಡಿದರೆ ನಾವು ತಕ್ಷಣ ಮಾಡಲು ಅನುಕೂಲವಾಗು ತ್ತದೆ.

Un-authorise Construction of Buildings at Bijapur.

513 SRI M. H. BEKINALKAR (Sindgi).—Will the Minister for Housing and Urban Develo ment be pleased to state.—

(a) number of un-authorised constructions going on at Bijapur: